ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂ: 080-22343980/85

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 30.01.2018.

ಸಂಖ್ಯೆ: ಕಾಶಿಇ:ಶೈವಿ:184:ರೋ.ರೇಂ.ಪ್ರ:2017-18

# ಸುತ್ತೋಲೆ

ವಿಷಯ: ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕದ ಅಂಗವಾಗಿ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಮುಕ್ತ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:BSG/SHQ/14664/2017-18 dt:16.01.2018.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರವಣಬೆಳಗೊಳದಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕದ ಸೇವಾ ಕರ್ತವ್ಯಕ್ಕಾಗಿ ಸ್ವ ಇಚ್ಛೆಯಿಂದ ಭಾಗವಹಿಸುವ ರೋವರ್ಸ್ & ರೇಂಜರ್ಸ್, ರೋವರ್ ಸ್ಕೌಟ್ಸ್ ಲೀಡರ್ಸ್ / ರೇಂಜರ್ಸ್ ಲೀಡರ್ಸ್‌ಗಳಿಗೆ ದಿನಾಂಕ:04.02.2018 ರಿಂದ 08.02.2018 ರವರೆಗೆ ಮೊದಲನೆಯ ಬ್ಯಾಚ್, 08.02.2018 ರಿಂದ 12.02.2018 ರವರೆಗೆ ಎರಡನೆಯ ಬ್ಯಾಚ್ ಹಾಗೂ 12.02.2018 ರಿಂದ 16.02.2018 ರವರೆಗೆ ಮೂರನೆಯ ಬ್ಯಾಚ್‌ಗಳಲ್ಲಿ ಅನುಬಂಧದಲ್ಲಿ ಲಗತ್ತಿಸಿರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳು ಸ್ಕೌಟ್ಸ್ & ಗೈಡ್ಸ್ ಸಮವಸ್ತ್ರದೊಂದಿಗೆ ಭಾಗವಹಿಸಲು ಅನುಮತಿ ನೀಡಲಾಗಿದೆ ಹಾಗೂ ಸದರಿ ಕಾಲೇಜುಗಳ ರೇಂಜರ್ಸ್ / ರೋವರ್ಸ್ ಲೀಡರ್‌ಗಳಿಗೆ ಭಾಗವಹಿಸುವ ದಿನಗಳಿಗೆ ಅನ್ಯಕಾರ್ಯನಿಮಿತ್ತ ರಜೆ ಮಂಜೂರು ಮಾಡಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ರೋವರ್ಸ್ & ರೇಂಜರ್ಸ್ ವಿದ್ಯಾರ್ಥಿಗಳಿಗೆ ಹಾಗೂ ರೋವರ್ / ರೇಂಜರ್ಸ್ ಲೀಡರ್ಸ್‌ಗಳಿಗೆ (ಅಧ್ಯಾಪಕರಿಗೆ) ಹಾಸನ ಜಿಲ್ಲಾ ಆಡಳಿತದ ವತಿಯಿಂದ ಊಟ, ವಸತಿ ಹಾಗೂ ಪ್ರಯಾಣ ವೆಚ್ಚವನ್ನು ಹಾಗೂ ಪ್ರಯಾಣದ ದಿನಗಳಲ್ಲಿ ದಿನಭತ್ಯೆಯನ್ನು ನೀಡಲಾಗುವುದು.

ಮುಂದುವರೆದು ವಿದ್ಯಾರ್ಥಿಗಳ ಸುರಕ್ಷತಾ ದೃಷ್ಟಿಯಿಂದ, ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಹಾಸನ ಜಿಲ್ಲಾ ಲೀಡ್ ಕಾಲೇಜಿನ ಪ್ರಾಂಶುಪಾಲರು ಪ್ರತಿ ಬ್ಯಾಚ್‌ಗೊಮ್ಮೆ ಸದರಿ ಕಾರ್ಯಕ್ರಮಕ್ಕೆ ಭೇಟಿ ನೀಡಿ ಕಾಲೇಜು ಶಿಕ್ಷಣ ಇಲಾಖೆಯಿಂದ ಭಾಗವಹಿಸುವ ವಿದ್ಯಾರ್ಥಿಗಳ ಸುರಕ್ಷತಾ ಕ್ರಮಗಳ ಬಗ್ಗೆ ನಿಗಾವಹಿಸಲು ಸೂಚಿಸಲಾಗಿದೆ.

**ಪ್ರಾಂಶುಪಾಲರು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳು:**

1) ಶ್ರವಣಬೆಳಗೊಳದಲ್ಲಿ ನಡೆಯಲಿರುವ ಮಹಾಮಸ್ತಕಾಭಿಷೇಕದಲ್ಲಿ ಸ್ವ ಇಚ್ಛೆಯಿಂದ ಭಾಗವಹಿಸುವ ಸೇವಾ ನಿರತ ವಿದ್ಯಾರ್ಥಿಗಳ ಪೋಷಕರಿಂದ ಒಪ್ಪಿಗೆ ಪತ್ರವನ್ನು ಪಡೆದುಕೊಳ್ಳತಕ್ಕದ್ದು.
2) ವಿದ್ಯಾರ್ಥಿನಿಯರ ಸುರಕ್ಷತೆಯ ಹಿತದೃಷ್ಟಿಯಿಂದ ರೇಂಜರ್ಸ್ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಕಾಲೇಜುಗಳಿಂದ ಕಡ್ಡಾಯವಾಗಿ ಮಹಿಳಾ ಅಧ್ಯಾಪಕರನ್ನು ನಿಯೋಜಿಸಿ, ಅಗತ್ಯ ಸುರಕ್ಷತಾ/ರಕ್ಷಣಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸುವುದು.

3) ವಿದ್ಯಾರ್ಥಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಸ್ಕೌಟ್ಸ್ & ಗೈಡ್ಸ್‌ನ ಮುಖ್ಯಸ್ಥರ ಅನುಮತಿ ಇಲ್ಲದೆ ಉದ್ದೇಶಿತ ಕಾರ್ಯಕ್ರಮ / ಸ್ಥಳವನ್ನು ಹೊರತುಪಡಿಸಿ ಇತರೆ ಸ್ಥಳಗಳಿಗೆ ಭೇಟಿ ನೀಡಲು ಅನುಮತಿ ಇರುವುದಿಲ್ಲ.

4) ವಿದ್ಯಾರ್ಥಿಗಳ ತಂಡದೊಂದಿಗೆ ತೆರಳುವ ರೇಂಜರ್ಸ್ / ರೋವರ್ಸ್ ಲೀಡರ್‌ಗಳು ಶ್ರೀ ಎಲ್.ಟಿ ಲೋಕೇಶ್, ರಾಜ್ಯ ತರಬೇತಿ ಆಯುಕ್ತರು, ಮೊ.ಸಂ: 9449886981 / ಶ್ರೀ ಎಂ. ಪ್ರಭಾಕರ ಭಟ್, ರಾಜ್ಯ ಸಂಘಟನಾ ಆಯುಕ್ತರು, ಮೊ. ಸಂ: 9448914540 ರವರಲ್ಲಿ ಸ್ಕೌಟ್ಸ್ & ಗೈಡ್ಸ್, ಸ್ವಯಂ ಸೇವಕ ನಗರ, ಮೇಲುಕೋಟೆ ರಸ್ತೆ, ಶ್ರೀ ಕ್ಷೇತ್ರ ಶ್ರವಣಬೆಳಗೊಳ ಇಲ್ಲಿ ಆಯಾ ಬ್ಯಾಚ್ ಪ್ರಾರಂಭ ದಿನದ ಬೆಳಗ್ಗೆ 9.00 ಗಂಟೆಗೆ ವರದಿ ಮಾಡಿಕೊಂಡು, ಕಾರ್ಯಕ್ರಮದ ಬಗ್ಗೆ ಮಾರ್ಗದರ್ಶನ ಪಡೆದುಕೊಳ್ಳುವುದು ಹಾಗೂ ಹಾಜರಾತಿ ಪ್ರಮಾಣ ಪತ್ರವನ್ನು ಪಡೆದು ಪ್ರಾಂಶುಪಾಲರಿಗೆ ಒಪ್ಪಿಸುವುದು.

ತಮ್ಮ ವಿಶ್ವಾಸಿ,

**ಕಾಲೇಜು ಶಿಕ್ಷಣ ಆಯುಕ್ತರು**

ಇವರಿಗೆ:

1. ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ.
2. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು, ಶಿವಮೊಗ್ಗ, ಮಂಗಳೂರು- ತಮ್ಮ ವ್ಯಾಪ್ತಿಗೆ ಬರುವ ಸಂಬಂಧಿಸಿದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಸಂಬಂಧಿಸಿದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಜಂಟಿ ನಿರ್ದೇಶಕರ ಮುಖಾಂತರ.
4. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, # 39, ಶಾಂತಿ ಗೃಹ, ಪ್ಯಾಲೇಸ್ ರಸ್ತೆ, ಬೆಂಗಳೂರು – 01.
5. ಮಾಹಿತಿ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.
6. ಶ್ರೀ ಆರ್.ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
7. ಕಛೇರಿ ಪ್ರತಿ.

ಅನುಬಂಧ

ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕದ ಅಂಗವಾಗಿ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು / ಅಧ್ಯಾಪಕರುಗಳು ಭಾಗವಹಿಸಲು ಅನುಮತಿ ನೀಡಲಾಗಿರುವ ವಿದ್ಯಾರ್ಥಿಗಳನ್ನೊಳಗೊಂಡ ಕಾಲೇಜುಗಳ ವಿವರ.

ಪ್ರಥಮ ಬ್ಯಾಚ್ : ದಿನಾಂಕ:04.02.2018 ರಿಂದ 08.02.2018 ರವರೆಗೆ

| ಕ್ರ.ಸಂ. | ಕಾಲೇಜಿನ ಹೆಸರು | ರೋವರ್ಸ್ (ವಿದ್ಯಾರ್ಥಿಗಳು) ಸಂಖ್ಯೆ | ರೇಂಜರ್ಸ್ (ವಿದ್ಯಾರ್ಥಿನಿಯರ) ಸಂಖ್ಯೆ | ರೋವರ್ಸ್ ಲೀಡರ್ಸ್ (ಪುರುಷ ಅಧ್ಯಾಪಕರ ಸಂಖ್ಯೆ) | ರೇಂಜರ್ಸ್ ಲೀಡರ್ಸ್ (ಮಹಿಳಾ ಅಧ್ಯಾಪಕರ ಸಂಖ್ಯೆ) |
|---|---|---|---|---|---|
| 1 | ಸರ್ಕಾರಿ ಕಲಾ ಕಾಲೇಜು, ಹಾಸನ | 15 | 15 | 1 | 1 |
| 2 | ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ | 15 | 15 | 1 | 1 |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಕಲಗೂಡು | 15 | 15 | 1 | 1 |
| 4 | ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹಾಸನ. | 0 | 30 | 0 | 1 |
| 5 | ಸರ್ಕಾರಿ ಮಹಿಳಾ ಕಾಲೇಜು, ಹಾಸನ | 0 | 15 | 0 | 1 |
| 6 | ಎನ್.ಡಿ.ಆರ್.ಕೆ. ಕಾಲೇಜು, ಹಾಸನ | 0 | 15 | 0 | 1 |
| 7 | ಸರ್ಕಾರಿ ಮಹಿಳಾ ಕಾಲೇಜು, ಗಂಧದಕೋಟಿ | 0 | 15 | 0 | 1 |
| 8 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಲೂರು | 15 | 0 | 1 | 0 |
| 9 | ಹೆಚ್.ಡಿ.ದೇವೇಗೌಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಡುವಲಹಿಪ್ಪೆ. | 20 | 20 | 1 | 1 |
| 10 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ. | 15 | 0 | 1 | 0 |

ಎರಡನೇ ಬ್ಯಾಚ್ : ದಿನಾಂಕ:08.02.2018 ರಿಂದ 12.02.2018 ರವರೆಗೆ

| | | | | | |
|---|---|---|---|---|---|
| 1 | ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಕಲೇಶಪುರ, | 15 | 15 | 1 | 1 |
| 2 | ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೇಲೂರು | 15 | 15 | 1 | 1 |
| 3 | ಎ.ಎನ್.ವಿ ಪ್ರಥಮ ದರ್ಜೆ ಕಾಲೇಜು, ಗೊರುರು | 15 | 15 | 1 | 1 |
| 4 | ಸರಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ | 15 | 15 | 1 | 1 |
| 5 | ಸರಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸಿಪುರ | 15 | 15 | 1 | 1 |
| 6 | ಸರಕಾರಿ ಪ್ರಥಮ ದರ್ಜೆ ಕಾಲೇಜು, ಹಳ್ಳಿಮೈಸೂರು , ಹೊಳೆನರಸಿಪುರ | 15 | 15 | 1 | 1 |
| 7 | ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, | 15 | 15 | 1 | 1 |
| 8 | ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ | 15 | 23 | 1 | 1 |

ಮೂರನೇ ಬ್ಯಾಚ್ : ದಿನಾಂಕ:12.02.2018 ರಿಂದ 16.02.2018 ರವರೆಗೆ

| | | | | | |
|---|---|---|---|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು | 15 | 17 | 1 | 1 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ. | 12 | 0 | 1 | 0 |
| 3 | ಸರಕಾರಿ ಪ್ರಥಮ ದರ್ಜೆ ಕಾಲೇಜ ಶಿಗ್ಗಾಂವ | 19 | 20 | 1 | 1 |
| 4 | ಸರಕಾರಿ ಪ್ರಥಮ ದರ್ಜೆ ಕಾಲೇಜ ಸುಣಕಲಬಿದರಿ | 4 | 0 | 1 | 0 |
| 5 | ಸರಕಾರಿ ಪ್ರಥಮ ದರ್ಜೆ ಕಾಲೇಜ ಹಾನಗಲ್ಲ | 15 | 0 | 1 | 0 |
| 6 | ಸರಕಾರಿ ಪ್ರಥಮ ದರ್ಜೆ ಕಾಲೇಜ ರಾಣೇಬೆನ್ನೂರ | 15 | 10 | 1 | 1 |
| 7 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಿರಿಯಾಪಟ್ಟಣ | 15 | 17 | 1 | 1 |
| 8 | ಕೆ.ಎಸ್.ಎಸ್. ಕಾಲೇಜ್, ಸುಬ್ರಹ್ಮಣ್ಯ | 20 | 20 | 1 | 1 |
| 9 | ಎಸ್.ಡಿ.ಎಂ ಕಾಲೇಜು, ಉಜಿರೆ | 4 | 11 | 1 | 1 |
| 10 | ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ | 10 | 10 | 1 | 1 |
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಾಮದಪದವು | 6 | 7 | 1 | 1 |